# ಬರಿದೆ ಹೋಯಿತು ಹೊತ್ತು

1. **Ref.:** Dasara Padagalu – Purandara Dasara Keerthane, Samyukta Samputa, Edited by Shri Pavanje Gururao, Sriman Madhwa Siddantha Granthalaya, Udupi, page No. 396.
2. **Ref.:** Purandara Sahitya Darshana, Samputa 3, Samaja Darshana edited by Prof. S.K. Ramachandra Rao, page No. 131.
3. **Ref.:** Shri Purandara Dasara Sahitya Part – 2, Aartha Bhaava, edited by Shri Betageri Krishna Sharma and Shri Bengeri Huchha Rayaru, page No. 50.
4. **Note:** Lyrics given without highlights are as per Ref. 1. The wordings in Ref. 2 are same as in Ref. 1. The wordings in Ref. 3 are slightly different and are not considered here.
5. **Note:** Singer has followed these lyrics.
6. **Note:** The Ankita is same in Ref. 1 and Ref. 3. In Ref. 2 the Ankita is different. However, we have considered Ref.1 as standard and taken that Ankita for listing.

ರಾಗ: ಬಿಲಹರಿ ತಾಳ: ಅಟ

ಬರಿದೆ ಹೋಯಿತು ಹೊತ್ತು || ಪ ||
ನರಜನ್ಮ ಸ್ಥಿರವೆಂದು ನಾನಿದ್ದೆನೊ ರಂಗ || ಅಪ ||

ಆಸೆಯೆಂಬುದು ಎನ್ನ ಕ್ಲೇಶ ಪಡಿಸುತಿದೆ
ಘಾಸಿಯಾದೆನೊ ಹರಿ ಶೇಷಶಾಯಿ
ವಾಸುದೇವನೆ ನಿನ್ನ ಧ್ಯಾನವ ಮಾಡದೆ
ನಾಶವಾಯಿತು ಜನ್ಮ ಮೋಸ ಹೋದೆನು ಕೃಷ್ಣ || 1 ||

ಸತಿಸುತರೆಂತೆಂಬ ಅತಿ ಭ್ರಾಂತಿಗೊಳಗಾಗಿ
ಮತಿಹೀನನಾದೆನೊ ಚ್ಯುತಿದೂರನೆ
ಸತತ ವಿಷಯದಿಂದ ಹತನಾದೆ ಮನವೆನ್ನ
ಗತಿಗೆಡಿಸುತಿದೆ ಲಕ್ಷ್ಮೀಪತಿ ಸರ್ವೋತ್ತಮನೆ || 2 ||

ಪರರ ಸೇವೆಯ ಮಾಡಿ ಪರರನ್ನೆ ಕೊಂಡಾಡಿ
ಮರುಳುತನದಲಿ ಮತಿಹೀನನಾದೆ
ನೆರೆ ನಂಬಿದೆನೊ ನಿನ್ನ ಕರುಣದಿಂದಲಿ ಎನ್ನ
ಮರೆಯದೆ ಸಲಹಯ್ಯ ಪುರಂದರವಿಠಲ || 3 ||

**ಕಠಿಣ ಪದಗಳ ಅರ್ಥ ಮತ್ತು ಟಿಪ್ಪಣಿ:**

**ಚ್ಯುತಿದೂರನೆ** – ನಾಶವಿಲ್ಲದವನೆ; ಅಚ್ಯುತನೆ.

**ಸತತ** – ಎಂದೆಂದೂ ಇರುವ.

**Classification:** Keerthane
**Ankita:** purandara vittala
**Location:** NA
**Category:** Vairagya, Samsara Chitragalu
**Sub-Category:** nara, janma, ranga, Ase, Krishna, Vishnu, Dhyana, mosa, patni, putra, mana, Lakshmi, hari sarvottama, karuna,
**Pravachana:** NA
**Explanation:** NA